# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ವಾರ್ಡ್ ಸದಸ್ಯರ ಸಮಿತಿ ವಾರ್ಡ್ ಸಂಖ್ಯೆ: 89– ಜೋಗುಪಾಳ್ಯ ವಾರ್ಡಿನ ದಿನಾಂಕ: 19-04-2021 ರಂದು ನಡೆದ ಸಭೆಯ ನಡವಳಿಗಳು

ಮಾನ್ಯ ಆಯುಕ್ತರು ಬಿಬಿಎಂಪಿ ರವರ ಕಛೇರಿ ಆದೇಶದ ಸಂಖ್ಯೆ: **ಬಿ12(5)ಪಿಆರ್/35/** 2020-21/21-09-2020 ರ ಆದೇಶದಂತೆ ದಿನಾಂಕ: 19-04-2021 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಬಿಬಿಎಂಪಿ **ಸಂಪರ್ಕ ಕೇಂದ್ರ, 1ನೇ ಮಹಡಿ, ಗುಂಡಪ್ಪ ಪಾರ್ಕ್ ಪಕ್ಕ ಜೋಗುಪಾಳ್ಯ, ಬೆಂಗಳೂರು–560008** ರಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು,

**ಸಭೆಗೆ ಹಾಜರಿದ್ದವರ ವಿವರಗಳು**

1) ಶ್ರೀ.ಬಿ ಮಹೇಶ್ ಕುಮಾರ್, ನೋಡಲ್ ಅಧಿಕಾರಿ, ಸಹಾಯಕ ನಿಯಂತ್ರಕರು ಹಣಕಾಸು (ಪೂರ್ವ)
2) ಶ್ರೀ ಮೂರ್ತಿ ವಾರ್ಡ್ ಸಮಿತಿಯ ಕಾರ್ಯದರ್ಶಿ, ಸಹಾಯಕ ಅಭಿಯಂತರರು, ಶ್ರೀಕಾಂತ್ ಸದಸ್ಯರು ಕಿರಿಯ ಆರೋಗ್ಯ ಪರಿವಿಕ್ಷಕರು ಹಾಗೂ ಬಿಬಿಎಂಪಿ ಇತರ ವಿಭಾಗಗಳ ಅಂದರೆ, ಆರೋಗ್ಯ, ಕಾಮಗಾರಿ, ಘನತಾಜ್ಯ ವಿಭಾಗ, ಅಧಿಕಾರಿಗಳು, ಬೆಸ್ಕಾಂ ಅಧಿಕಾರಿಗಳು ಹಾಜರಿದ್ದರು.
3) ವಾರ್ಡ್ ಸಮಿತಿ ಸದಸ್ಯರಾದ, ಶ್ರೀ.ಹೇಮಂತ್ ನಾಗ್, ಆಶಾ, ಅಲ್ವಿನ್, ರಮೇಶ್ ರೆಡ್ಡಿ, ರಾಜೇಶ್ ಹಾಗೂ ಉಮೇಶ್ ರವರು ಸಭೆಗೆ ಹಾಜರಿದ್ದರು,

ಸಭೆಯನ್ನು ಪ್ರಾರಂಭಿಸುತ್ತಾ ಮೊದಲನೆಯದಾಗಿ ನೋಡಲ್ ಅಧಿಕಾರಿಯವರು ಸಭೆಯ ಹಾಜರಿದ್ದ ಅಧಿಕಾರಿಗಳನ್ನು ಮತ್ತು ಅಹ್ವಾನಿತರಾಗಿದ್ದ ಸ್ಥಳೀಯ ನಾಗರೀಕರಿಗೆ ಸ್ವಾಗತವನ್ನು ಕೋರಿ ಸಭೆಯನ್ನು ಪ್ರಾರಂಭಿಸಲಾಯಿತು.

## ವಾರ್ಡ್ ಕಮಿಟಿ ಸದಸ್ಯರು ಚರ್ಚಿಸಿದಂತಹ ವಿಷಯಗಳು ;-

1) ಇಲ್ತೆತೋಪು ರಸ್ತೆಯ ಕಾಮಗಾರಿಯ ಕಾರ್ಯ ಹಾಗೂ ಬೀಡಿ ದೀಪಗಳ ದುರಸ್ತಿಯ ಪ್ರಸ್ತುತ ನಡೆಯುತ್ತಿರುವ ಬಗ್ಗೆ ಚರ್ಚಿಸಲಾಯಿತು.
2) ನೋಡಲ್ ಅಧಿಕಾರಿ ಹಾಗೂ ಸಭೆಯ ಸಮೀತಿ ಸದಸ್ಯರ ನಿರ್ಧಾರದಂತೆ ಪ್ರಸ್ತುತ ಮುಖ್ಯವಾಗಿ ಕೋವಿಡ್–19 ಸಾಂಕ್ರಾಮಿಕ ರೋಗ ವಾರ್ಡಿನಲ್ಲಿ ಹಬ್ಬುತ್ತಿರುವುದನ್ನು ತಡೆಗಟ್ಟಲು ಹಾಗೂ ಮುಂದಿನ ದಿನಗಳಲ್ಲಿ ವ್ಯಾಕ್ಸಿನ್ ಹಾಗೂ ಸಾರ್ವಜನಿಕರಿಗೆ ಕೋವಿಡ್–19 ಪರಿಕ್ಷೇಯನ್ನು ಶೀಬಿರಗಳನ್ನು ಎರ್ಪಡಿಸಿ ನಡೆಸುವ ಬಗ್ಗೆ ಆರೊಗ್ಯ ಪರಿವಿಕ್ಷಕರು ಹಾಗೂ ಡಾ|| ಕೀಷೋರ್ ರವರೊಡನೆ ಚರ್ಚಿಸಲಾಯಿತು.

## ವಾರ್ಡ್ ಸಮಿತಿ ಸದಸ್ಯರು ಸಲ್ಲಿಸಿರುವ ದೂರುಗಳು:-

1) ವಾರ್ಡಿನ ಸಮಿತಿ ಸದಸ್ಯರಾದ ಉಮೇಶ್ ರವರು ಮಾತನಾಡುತ್ತಾ ಅವರ ಮನೆಯ ಮುಂದೆ ವಿದ್ಯುತ್ ಕಂಭ ಇದ್ದು ಇಂದಿರಗಾಂಧಿ ರಸ್ತೆ ಕಂಬವು ವಾಲಿರುತ್ತದೆ ಯಾವುದೇ ಸಮಯದಲ್ಲೂ ಸಹ ಕಂಭವು ಬಿಲುವ ಸ್ಥಿತಿಯಲ್ಲಿದೆ ಮತ್ತು ಬೆಸ್ಕಾಂ ಅಧಿಕಾರಿಗಳಿಗೆ ಈ ವಿಷಯದ ಬಗ್ಗೆ ದೂರನ್ನು ಕೊಟ್ಟರು ಸಹ ಇನ್ನು ಕಂಭವನ್ನು ಬದಲಾಯಿಸಿರುವುದಿಲ್ಲ.

ಕ್ರಮ ;- AEE ಮತ್ತು AE BESCOM ರವರು ಕ್ರಮ ವಹಿಸುವುದು.

2) ವಾರ್ಡಿನ ಸಮಿತಿ ಸದಸ್ಯರಾದ ರಮೇಶ್ ರೆಡ್ಡಿ ರವರು ಮಾತನಾಡುತ್ತಾ ಅವರ ಮನೆಯ ವಿದ್ಯುತ್ ಮೀಟರ್ ಸುಟ್ಟು ಹೊಗಿದ್ದು ಅದನ್ನು ಬದಲಾಯಿಸಲು ಬೆಸ್ಕಾಂ ಲೈನ್‌ಮೆನ್ ರವರು ಸರಿಯಾಗಿ ಸ್ಪಂಧಿಸುತ್ತಿರುವುದಿಲ್ಲ ಹಾಗೂ ಮೀಟರ್ ಬದಲಾಯಿಸಲು ಹೆಚ್ಚಿನ ದರವನ್ನು ಕೇಳುತ್ತಿದ್ದಾರೆ. ಈ ವಿಷಯವನ್ನು ಸಭೆಯಲ್ಲಿ AE BESCOM ರುದ್ರಮುನಿಯವರ ಗಮನಕ್ಕು ಸಹ ತರಲಾಯಿತು ಹಾಗೂ ಕೂಡಲೆ ಕ್ರಮವಹಿಸಲು ಸೂಚಿಸಲಾಗಿದೆ.

ಕ್ರಮ ;- AEE ಮತ್ತು AE BESCOM ರವರು ಕ್ರಮ ವಹಿಸುವುದು.

3) ಶ್ರೀ ಹೆಮಂತ್ ನಾಗ್ ವಾರ್ಡ್ ಸಮಿತಿ ಸದಸ್ಯರು ಮಾತನಾಡುತ್ತಾ ಹಲಸೂರು ರೆಫೇರಲ್ ಆಸ್ಪತ್ರೆಯಲ್ಲಿರುವ ವ್ಯಾಕ್ಸಿನೇಷನ್ ಸೆಂಟರ್‌ನಲ್ಲಿ ಸರಿಯಾದ ಸೌಲಭ್ಯಗಳಿರುವುದಿಲ್ಲ. ಸೆಂಟರ್‌ನಲ್ಲಿ ಫ್ಯಾನ್ ಇಲ್ಲದೆ ಇರುವುದರಿಂದ ಸಾರ್ವಜನಿಕರು ವ್ಯಾಕ್ಸಿನೇಷನ್ ಹಾಕಿಸಿಕೊಳ್ಳುವಾಗ ಅನಾನುಕೂಲವಾಗುತ್ತದೆ ಮತ್ತು ಅವರು ನಿಗಾಘಟಕದಲ್ಲಿ ಇರುವಾಗ ಬಹಳ ಕಷ್ಟಕರವಾಗಿರುತ್ತದೆ. ವೈದ್ಯರಿಗೆ ಸೌಲಭ್ಯದ ಕೊರತೆ ಇದ್ದು ಸ್ಥಳಾವಕಾಶ ಅಭಾವ ಸಹ ಇರುತ್ತದೆ.

ಕ್ರಮ ;- AEE ಮತ್ತು AE BBMP ಮತ್ತು ಆರೋಗ್ಯ ಅಧಿಕಾರಿಗಳು ರವರು ಕ್ರಮ ವಹಿಸುವುದು.

ಅಂತಿಮವಾಗಿ ಮೇಲ್ಕಂಡ ಎಲ್ಲಾ ವಿಷಯಗಳನ್ನು ಚರ್ಚಿಸಲಾಗಿ ಹಾಗೂ ಚರ್ಚಿಸಿದ ವಿಷಯಗಳ ಬಗ್ಗೆ ಅಧಿಕಾರಿಗಳು ಮುಂದಿನ ವಾರ್ಡ್ ಸಮಿತಿ ಸಭೆಗೆ ಸಂಬಂಧಪಟ್ಟ ಆಧಿಕಾರಿಗಳು ಕೈಗೊಂಡ ಕ್ರಮದ ವರದಿಯನ್ನು ನೀಡಲು ಸೂಚಿಸಿ, ಸಭೆಯನ್ನು ಮುಕ್ತಾಯಗೊಳಿಸಿದರು.

**ನೋಡೆಲ್ ಅಧಿಕಾರಿಗಳು**
**ವಾರ್ಡ್ ಸಂಖ್ಯೆ–89– ಜೋಗುಪಾಳ್ಯ**
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಪ್ರತಿಯನ್ನು,

1) ವಿಶೇಷ ಆಯುಕ್ತರು (ಆಡಳಿತ) ರವರ ಅವಗಾಹನೆಗಾಗಿ ಸಲ್ಲಿಸಿದೆ.
2) ಜಂಟಿ ಆಯುಕ್ತರು (ಪೂರ್ವ) ರವರ ಮಾಹಿತಿಗಾಗಿ ಕಳುಹಿಸಿಕೊಡಲಾಗಿದೆ.
3) ವಾರ್ಡ್ ಸಮಿತಿಯ ಅಧ್ಯಕ್ಷರ ಮಾಹಿತಿಗಾಗಿ ಕಳುಹಿಸಿದೆ.
4) ಮಾನ್ಯ ಕೌನ್ಸಿಲ್ ಕಾರ್ಯದರ್ಶಿಯವರಿಗೆ ಕಳುಹಿಸಿದೆ.
5) ವಾಡ್ ಸಮಿತಿಯ ಸದಸ್ಯರುಗಳ ಮಾಹಿತಿಗಾಗಿ ಕಳುಹಿಸಿದೆ.
6) ಕಛೇರಿ ಪ್ರತಿ